₹ 5
ಸಂಪುಟ: 3 ಸಂಚಿಕೆ: 159 ಪುಟಗಳು: 12+4
13.06.2018 ಬುಧವಾರ
ಬೆಂಗಳೂರು | ಹುಬ್ಬಳ್ಳಿ | ಮಂಗಳೂರು
ದಾವಣಗೆರೆ | ಕಲಬುರಗಿ | ಬೆಳಗಾವಿ
@vishwavaninews
vishwavanitimely
epaper.vishwavani.news
vishwavani.news
ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ರೀ
ರಮೇಶಕುಮಾರ್,
ನಿಮ್ಮಂಥವರು ಹೀಗೆ
ಮಾಡಬಹುದೇನ್ರಿ?
ಬೇಟೆ 6
ಜಯವೀರ ವಿಕ್ರಮ್
ಸಂಪತ್ ಗೌಡ

ದಾರಿದೀಪೋಕ್ತಿ
ನೀವು ಗೆದ್ದಾಗ ಹೆಚ್ಚು ಮಾತಾಡಬೇಕಿಲ್ಲ. ನಿಮ್ಮ ಗೆಲುವೇ ಮಾತಾಡಲಿ.
ನೀವು ಸೋತಾಗಲೂ ಹೀಗೇ ಮಾಡಿ. ಮಾತಿಗಿಂತ ಕೃತಿಯೇ ಮೇಲು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಮೆರಿಕದ ಖ್ಯಾತ ಗಾಯಕ ನಿಕೊಲಸ್ ಜೆರ್ರಿ ಜೊನಸ್ ಜತೆ ಸುತ್ತಾಡುತ್ತಿರುವ ಬಾಲಿವುಡ್ ನಟಿ ಪ್ರಿಯಾಂಕ ಚೋಪ್ರಾ, ನಿಕೊಲಸ್ ಸಹೋದರ ಸಂಬಂಧಿ ಕೆವಿನ್ ಮದುವೆ ವೇಳೆ ಕಾಣಿಸಿಕೊಂಡು ಸಾಕಷ್ಟು ಸುದ್ದಿ ಮಾಡುತ್ತಿದ್ದಾರೆ.

ಎರಡು ಕಡೆ ದಿಬ್ಬ ಕುಸಿತ | ರಾತ್ರಿಯಿಡೀ ಮಳೆ, ರಸ್ತೆಯಲ್ಲೇ ಕಾಲ ಕಳೆದ ಪ್ರಯಾಣಿಕರು | ಊಟ, ತಿಂಡಿ, ಕುಡಿಯುವ ನೀರು, ಮೊಬೈಲ್ ನೆಟ್‌ವರ್ಕ ಇಲ್ಲದೆ ಪರದಾಟ | ನೆರವಿಗೆ ಧಾವಿಸಿದ ಸಾರ್ವಜನಿಕರು | ಅಸಡ್ಡೆ ಮೆರೆದ ಜಿಲ್ಲಾಡಳಿತದ ವಿರುದ್ಧ ಆಕ್ರೋಶ ಪ್ರಗತಿಯಲ್ಲಿ ರಸ್ತೆ ತೆರವು ಕಾರ್ಯಾಚರಣೆ | ಬುಧವಾರ ಸಂಜೆವರೆಗೂ ಸಂಚಾರ ನಿಷೇಧ | ತುರ್ತು ಪರಿಹಾರಕ್ಕೆ ಸಿಎಂ ಆದೇಶ

ಕುಸಿದ ಚಾರ್ಮಾಡಿ, ಕಸಿದ ನೆಮ್ಮದಿ

ವಿಶ್ವವಾಣಿ ಸುದ್ದಿಮನೆ ಚಿಕ್ಕಮಗಳೂರು

ಕಳೆದ ನಾಲ್ಕುದಿನಗಳಿಂದ ಮಲೆನಾಡು ಭಾಗದಲ್ಲಿ ಸುರಿದ ಮಳೆಯಿಂದ ಚಿಕ್ಕಮಗಳೂರು-ಮಂಗಳೂರು ಸಂಪರ್ಕ ಕಲ್ಪಿಸುವ ಚಾರ್ಮಾಡಿ ಘಾಟ್‌ನಲ್ಲಿ ನಾಲ್ಕು ಕಡೆ ಗುಡ್ಡ ಕುಸಿದು, ರಸ್ತೆ ಸಂಪರ್ಕ ಕಡಿತಗೊಂಡಿದ್ದರಿಂದ ಸಾವಿರಾರು ಪ್ರಯಾಣಿಕರು ತೊಂದರೆ ಅನುಭವಿಸಿದರು.

ಮಂಗಳವಾರ ಬೆಳಗಿನ ಜಾವ ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿದು ರಸ್ತೆಯ ಮೇಲೆ ಮರ ಮತ್ತು ಮಣ್ಣು ಬಿದ್ದಿದ್ದರಿಂದ ರಸ್ತೆಯಲ್ಲಿಯೇ ಕಿಲೋ ಮೀಟರ್‌ಗಟ್ಟಲೇ ವಾಹನ ನಿಲ್ಲುವಂತಾಯಿತು. ರಸ್ತೆ ಕಿರಿದಾಗಿದ್ದು, ಎರಡೂ ಬದಿಯಲ್ಲಿ ಸಾಲು ನಿಂತಿದ್ದ ವಾಹನಗಳಿಂದ ಅತ್ತ ಮುಂದೆಯೂ ಹೋಗಲಾರದೆ. ಇತ್ತ ಹಿಂದೆಯೂ ಬರಲಾರದೆ. ಸುರಿಯುತ್ತಿದ್ದ ಮಳೆಯಲ್ಲಿಯೇ ವಾಹನ ಸವಾರರು ಕಾಲ ಕಳೆಯುವಂತಾಯಿತು.

ಮಳೆ ಹಾಗೂ ಮಂಜು ಕವಿದ ವಾತಾವರಣದಲ್ಲಿ ತಮ್ಮ ವಾಹನದಿಂದ ಕೆಳಗಿಳಿಯಲು ಆಗದೆ, ಊಟವಿಲ್ಲದೆ, ಎಲ್ಲಿ ತಮ್ಮ ಮೇಲೆಯೇ ಗುಡ್ಡ ಬೀಳುತ್ತದೆಯೋ ಎಂಬ ಜೀವ ಭಯದಿಂದ ಪ್ರಯಾಣಿಕರು ನರಕ ಸದೃಶ್ಯ ಅನುಭವಿಸಿದರು.

ಕಾರ್ಯಾಚರಣೆಗೆ ಇಳಿದ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ, ಸ್ಥಳೀಯರು: ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿದಿದೆ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಮಂಗಳವಾರ ಬೆಳಗಿನ ಜಾವದಿಂದಲೇ ಪೊಲೀಸ್ ಇಲಾಖೆ, ಅಗ್ನಿ ಶಾಮಕ ದಳ ಸಿಬ್ಬಂದಿ ರಾತ್ರಿಯಿಂದಲೇ ಕುಸಿದು ಬಿದ್ದ ಮಣ್ಣು, ಮರಗಳ ತೆರವಿಗೆ ಮುಂದಾದರೂ ಸುರಿಯುತ್ತಿದ್ದ ಮಳೆ ಕಾರ್ಯಾಚರಣೆಗೆ ಅಡ್ಡಿ ಉಂಟು ಮಾಡಿತು. ರಸ್ತೆಯಿಂದ ಮಣ್ಣು, ಮರಗಳನ್ನು ತೆರವುಗೊಳಿಸುತ್ತಿದ್ದಂತೆ ಪಕ್ಕದಲ್ಲಿಯೇ ಮತ್ತೇ ಗುಡ್ಡ ಕುಸಿಯುತ್ತಿದ್ದರಿಂದ ಕಾರ್ಯಾಚರಣೆಗೆ ಇನ್ನಷ್ಟು ಹಿನ್ನಡೆ ಉಂಟಾಯಿತು.

ಜೆಸಿಬಿ ಯಂತ್ರಗಳ ಮೂಲಕ ಮಂಗಳವಾರ ಮಧ್ಯಾಹ್ನದವರೆಗೂ ಕಾರ್ಯಾಚರಣೆ ನಡೆಸಿದ ಪೊಲೀಸ್ ಇಲಾಖೆ ಅಗ್ನಿಶಾಮಕ ದಳದ ಸಿಬ್ಬಂದಿ, ಸಾರ್ವಜನಿಕರ ನೆರವಿನೊಂದಿಗೆ ರಸ್ತೆಯಲ್ಲಿ ಬಿದ್ದಿದ್ದ ಮರ ಹಾಗೂ ಮಣ್ಣನ್ನು ತೆರವುಗೊಳಿಸಿ ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿದ್ದ ವಾಹನಗಳ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಯಿತು.



- ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿತ
- ಮಂಗಳವಾರ ರಾತ್ರಿಯಿಂದ ಮಂಗಳವಾರ ಮಧ್ಯಾಹ್ನದ ವರೆಗೂ ಟ್ರಾಫಿಕ್‌ನಲ್ಲಿ ಸಿಲುಕಿದ ಪ್ರಯಾಣಿಕರು
- ಮಣ್ಣು, ಮರ ತೆರವು ಕಾರ್ಯಾಚರಣೆಗೆ ಅಡ್ಡಿಯಾದ ಮಳೆ
- ಮುಂಜಾಗ್ರತಾ ಕ್ರಮವಾಗಿ ಬುಧವಾರ ಸಂಜೆವರೆಗೂ ವಾಹನ ಸಂಚಾರ ನಿಷೇಧ
- ರಸ್ತೆಯಲ್ಲೇ ಅಡುಗೆ ಮಾಡಿ ಊಟ ಮಾಡಿದ ಪ್ರಯಾಣಿಕರು
- ಪೊಲೀಸ್ ಇಲಾಖೆ, ಅಗ್ನಿಶಾಮಕ ದಳ, ಸ್ಥಳೀಯರ ನೆರವಿನಿಂದ ರಸ್ತೆ ತೆರವು
- ಪ್ರಯಾಣಿಕರ ನೆರವಿಗೆ ಬಂದ ಸ್ಥಳೀಯರು
- ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ಅಣ್ಣಾಮಲೈ ಹಾಗೂ ದಕ್ಷಣ ಕನ್ನಡ ಜಿಲ್ಲೆಯ ಅಧಿಕಾರಿಗಳು ಸ್ಥಳದಲ್ಲಿಯೇ ಮೊಕ್ಕಂ

ಜಿಲ್ಲಾಡಳಿತದ ವಿರುದ್ಧ ಜನರ ಆಕ್ರೋಶ

ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿದು ರಸ್ತೆ ಸಂಚಾರಕ್ಕೆ ಅಡ್ಡಿಯಾದರು ಚಿಕ್ಕಮಗಳೂರು ಜಿಲ್ಲಾಡಳಿತ ಹಾಗೂ ದಕ್ಷಿಣ ಕನ್ನಡ ಜಿಲ್ಲಾಡಳಿತ ತಕ್ಷಣ ನಮ್ಮ ನೆರವಿಗೆ ಬಾರದೆ. ಸಾವಿರಾರು ಜನರು ಊಟ, ತಿಂಡಿ, ಕುಡಿಯಲು ನೀರು ಇಲ್ಲದೆ. ಗಂಟೆಗಟ್ಟಲೆ ಕಾಯುವಂತಾಯಿತು ಎಂದು ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ದಾರಿಯಲ್ಲಿ ಸಿಲುಕಿದ್ದ ಪ್ರಯಾಣಿಕರ ನೆರವಿಗೆ ಧಾವಿಸಿದರು.

ತುರ್ತು ಪರಿಹಾರಕ್ಕೆ ಸೂಚನೆ

ಚಾರ್ಮಾಡಿಯಲ್ಲಿ ಪರಿಹಾರ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಜಿಲ್ಲಾಡಳಿತಗಳಿಗೆ ಸೂಚನೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರಾವಳಿ ಮತ್ತು ಮಲೆನಾಡು ಭಾಗದಲ್ಲಿ ಕಳೆದೆರಡು ದಿನಗಳಿಂದ ನಿರಂತರವಾಗಿ ಮಳೆ ಸುರಿಯುತ್ತಿದೆ. ಇದರಿಂದ ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿದು ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಗುಡ್ಡ ಕುಸಿತದಿಂದ ರಸ್ತೆ ಮೇಲೆ ಬಿದ್ದಿರುವ ಮಣ್ಣನ್ನು ತೆರವುಗೊಳಿಸುವ ಕಾರ್ಯ ನಡೆಸಲಾಗುತ್ತಿದೆ ಎಂದರು.

ನೆರವಿಗೆ ಬಂದ ಗ್ರಾಮಸ್ಥರು

ಗುಡ್ಡ ಕುಸಿದ ಸುದ್ದಿ ತಿಳಿಯುತ್ತಿದ್ದಂತೆ ಸುತ್ತಲ ಗ್ರಾಮದ ಗ್ರಾಮಸ್ಥರು, ಸಂಸ್ಥೆಯ ಸದಸ್ಯರು ಆಗಮಿಸಿ ಘಾಟ್‌ನಲ್ಲಿ ಸಿಲುಕಿದ್ದ ಪ್ರಯಾಣಿಕರಿಗೆ ಆಹಾರದ ವ್ಯವಸ್ಥೆ ಕಲ್ಪಿಸಿದರು. ಮಣ್ಣು ತೆರವು ಕಾರ್ಯಾಚರಣೆಯಲ್ಲಿಯೂ ಭಾಗಿಯಾದರು.

> ಚಾರ್ಮಾಡಿ ಘಾಟ್‌ನಲ್ಲಿ ಗುಡ್ಡ ಕುಸಿದು ರಸ್ತೆ ಬಂದ್ ಆಗಿರುವುದರಿಂದ ಸಾವಿರಾರು ಪ್ರಯಾಣಿಕರು ಸಂಕಷ್ಟ ಅನುಭವಿಸುವಂತಾಯಿತು. ಅರಣ್ಯ ಇಲಾಖೆ, ಪಿಡ್ಯಬ್ಲ್ಯೂಡಿ, ಪೊಲೀಸ್ ಇಲಾಖೆ ಸಿಬ್ಬಂಧಿಗಳು ರಸ್ತೆ ತೆರವು ಕಾರ್ಯಚರಣೆ ನಡೆಸಿದ್ದಾರೆ. ಇನ್ನೂ ಕೆಲವೊಂದು ಗುಡ್ಡ ಕುಸಿಯುವ ಬೀತಿಯಿಂದ ಬುಧವಾರದ ವರೆಗೂ ಚಾರ್ಮಾಡಿ ಘಾಟ್ ಮಾರ್ಗದಲ್ಲಿ ಸಂಚಾರ ಸ್ಥಗಿತಗೊಳಿಸಲಾಗಿದೆ.
>
> **- ಕೆ.ಅಣ್ಣಾಮಲೈ** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಮಳೆಯ ನಡುವೆ ಅಡುಗೆ ತಯಾರು

ರಸ್ತೆಯಲ್ಲೇ ವಾಹನ ಸಿಲುಕಿಕೊಂಡದ್ದರಿಂದ ಪ್ರಯಾಣಿಕರು ತಮ್ಮ ಊಟದ ವ್ಯವಸ್ಥೆಯನ್ನು ತಾವೇ ಮಾಡಿಕೊಂಡರು. ಸುರಿಯುತ್ತಿದ್ದ ಮಳೆಯ ನಡುವೆಯೇ ರಸ್ತೆಯಲ್ಲಿಯೇ ಟಾರ್ಪಲ್ ಹಾಕಿ. ಅಡುಗೆ ಮಾಡಿ ಊಟ ಮಾಡಿದರು.

ಚಿಕಿತ್ಸೆ: ರಕ್ತದೊತ್ತಡದಿಂದ ಬಳಲುತ್ತಿದ್ದ ಮಹಿಳೆಗೆ ಔಷಧ ನೀಡಲಾಯಿತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಬೆಳ್ತಂಗಡಿಯ ಆಸ್ಪತ್ರೆಗೆ ಸ್ಥಳೀಯರು, ಪೊಲೀಸರ ನೆರವಿನಿಂದ ದಾಖಲಿಸಿದರು.

ಬಾಳೆ-ಹಲಸಿನ ಹಣ್ಣು, ಅನ್ನ, ನೀರು ಕೊಟ್ಟ ಮಹನೀಯರು | ಕಿರು ಬ್ಯಾರೇಜ್ ಕುಸಿತ: ಎರಡು ಗ್ರಾಮಗಳ ಸಂಪರ್ಕ ಕಡಿತ | ಶಿರಾಡಿ ಕಾಮಗಾರಿ ವಿಳಂಬದಿಂದ ಹೊರೆ !

ವಿವರ → 5

ವಿವಾಹ್!

ಹೆಂಡತಿ ಎಂದರೆ ಹದರಿಕೆ!

ಸತೀಶ ಜಾರಕಿಹೊಳಿ ರಾಜೀನಾಮೆ

ಬೆಳಗಾವಿ: ಯಮಕನಮರಡಿ ಕಾಂಗ್ರೆಸ್ ಶಾಸಕ ಸತೀಶ ಜಾರಕಿಹೊಳಿ ಎಐಸಿಸಿ ಕಾರ್ಯದರ್ಶಿ ಹುದ್ದೆಗೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ. ಎಐಸಿಸಿ ಅಧ್ಯಕ್ಷ ರಾಹುಲ್ ಗಾಂಧಿಗೆ ತಮ್ಮ ರಾಜೀನಾಮೆಯನ್ನು ಫ್ಯಾಕ್ಸ್ ಮೂಲಕ ಕಳುಹಿಸಿರುವುದಾಗಿ ಅವರು ತಿಳಿಸಿದ್ದಾರೆ.

ವಾಜಪೇಯಿ ಆರೋಗ್ಯ ಸ್ಥಿರ

ದೆಹಲಿ: ಮಾಜಿ ಪ್ರಧಾನಿ ವಾಜಪೇಯಿ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ. 93 ವರ್ಷದ ಅವರನ್ನು ಸೋಮವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಆರೋಗ್ಯ ಸ್ಥಿರವಾಗಿದೆ. ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ತಿಂಗಳ ಬಳಿಕ ತವರಿಗೆ ಸಿದ್ದರಾಮಯ್ಯ

4

ಎಚ್‌ಕೆಪಿ ಬಣಕ್ಕೆ ಸಿಕ್ಕಿತು ಭರವಸೆ

4

ಜಯನಗರ ಮತ ಎಣಿಕೆ ಇಂದು

ವಕ್ರತುಂಡೋಕ್ತಿ

ನಿಮ್ಮ ಮಕ್ಕಳಿಗೆ ಟ್ಯಾಕ್ಸ್ ಬಗ್ಗೆ ತಿಳಿವಳಿಕೆ ಮೂಡಿಸುವ ಸುಲಭ ಮಾರ್ಗವೆಂದರೆ, ಅವರು ತಿನ್ನುತ್ತಿರುವ ಐಸ್‌ಕ್ರೀಮ್‌ನಲ್ಲಿ ಶೇ.30ರಷ್ಟನ್ನು ನೀವೇ ಸೇವಿಸುವುದು.

ಅಣ್ವಸ್ತ್ರ ನಿಶ್ಯಸ್ತ್ರೀಕರಣದತ್ತ ಹೆಜ್ಜೆ ಹಾಕಿದ ಕಿಮ್-ಟ್ರಂಪ್

ಸಿಂಗಾಪುರ: ಒಂದು ವರ್ಷದ ಹಿಂದೆ ಅಣ್ವಸ್ತ್ರ ಕ್ಷಿಪಣಿ ವಿಚಾರವಾಗಿ ಹಾವು ಮುಂಗುಸಿಯಂತೆ ಕಚ್ಚಾಡುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಉತ್ತರ ಕೊರಿಯಾ ಅಧ್ಯಕ್ಷ ಕಿಮ್ ಜೊಂಗ್ ಉನ್ ಈಗ ಸ್ನೇಹದಿಂದ ಕೈ ಕುಲುಕಿದ್ದು, ಭವಿಷ್ಯದಲ್ಲಿ ಎರಡು ರಾಷ್ಟ್ರಗಳು ಉತ್ತಮ ಸ್ನೇಹಿತರಾಗುವ ಸಂದೇಶ ರವಾನಿಸಿದ್ದಾರೆ.

→ 4

> **ಈ ಕ್ಷಣವನ್ನು ಇಡೀ ವಿಶ್ವವೇ ಗಮನಿಸುತ್ತಿದೆ. ಅನೇಕ ಜನರು ಈ ಒಂದು ದೃಶ್ಯವನ್ನು ಕಲ್ಪನಾತೀತ ಚಿತ್ರದ ದೃಶ್ಯವೆಂದೇ ಭಾವಿಸುತ್ತಾರೆ. ಈ ಹಿಂದೆ ಇದ್ದ ಅನೇಕ ಪೂರ್ವಗ್ರಹಗಳನ್ನು ಪಕ್ಕಕ್ಕಿಟ್ಟು ನಾವಿಬ್ಬರೂ ಈ ಸಭೆಗೆ ಆಗಮಿಸಿದ್ದೇವೆ. ಇದು ಶಾಂತಿ ಸ್ಥಾಪನೆಯ ವಿಚಾರದಲ್ಲಿ ಮಹತ್ವವಾಗಿದ್ದು, ಶಾಂತಿ ಕಾಪಾಡುವ ಸಲುವಾಗಿ ತೆಗೆದುಕೊಂಡಿರುವ ಮುಖ್ಯ ಹೆಜ್ಜೆ ಎಂದು ನಂಬಿದ್ದೇನೆ.**
>
> **- ಕಿಮ್ ಜೊಂಗ್ ಉನ್** ಉತ್ತರ ಕೊರಿಯಾ ಅಧ್ಯಕ್ಷ

> **ಕಿಮ್ ಅವರ ಜತೆಗಿನ ಭೇಟಿ ಅತ್ಯುತ್ತಮವಾಗಿತ್ತು. ನಿರೀಕ್ಷೆಗೂ ಮೀರಿ ಈ ಸಭೆ ಫಲಪ್ರದವಾಗಿದೆ. ಮುಂದಿನ ದಿನಗಳಲ್ಲಿ ಉಭಯ ದೇಶಗಳು ಉತ್ತಮ ಸಂಬಂಧ ಹೊಂದಲಿವೆ. ಕಿಮ್ ಹಾಗೂ ನಾನು ಜತೆಯಾಗಿ ಮಹತ್ವದ ಸಮಸ್ಯೆಗಳನ್ನು ಬಗೆಹರಿಸುವ ವಿಶ್ವಾಸ ಬಂದಿದೆ.**
>
> **- ಡೊನಾಲ್ಡ್ ಟ್ರಂಪ್** ಅಮೆರಿಕ ಅಧ್ಯಕ್ಷ

ಈ ಜಂಟಿ ಹೇಳಿಕೆಯಿಂದ ಉಭಯ ರಾಷ್ಟ್ರಗಳ ನಡುವಣ ತಿಕ್ಕಾಟಕ್ಕೆ ಒಂದು ಬ್ರೇಕ್ ಬಿದ್ದಂತಾಗಿದೆ. ಈ ಜಂಟಿ ಹೇಳಿಕೆಯ ಪ್ರಮುಖ ಅಂಶಗಳು ಹೀಗಿವೆ...

1 ಅಮೆರಿಕ ಹಾಗೂ ಡಿಪಿಆರ್‌ಕೆ (ಉತ್ತರ ಕೊರಿಯಾ) ರಾಷ್ಟ್ರಗಳು ನೂತನ ಸಂಬಂಧದ ಭಾಗವಾಗಿ ಉಭಯ ದೇಶಗಳ ಜನರ ಶಾಂತಿ ಕಾಪಾಡಲು ಬದ್ಧವಾಗಿವೆ.
2 ಉಭಯ ರಾಷ್ಟ್ರಗಳು ಈ ಒಪ್ಪಂದದ ಮೂಲಕ ಎರಡೂ ರಾಷ್ಟ್ರಗಳಲ್ಲಿ ಶಾಂತಿ ನೆಲೆಸುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ.
3 2018ರ ಏಪ್ರಿಲ್ 27ರ ಪಂಮುಂಜೊಮ್ ನೀತಿಗೆ ಬದ್ಧವಾಗಿ ಡಿಪಿಆರ್‌ಕೆ ತನ್ನ ಎಲ್ಲ ಅಣ್ವಸ್ತ್ರಗಳನ್ನು ನಿಶ್ಯಸ್ತ್ರೀಕರಣಗೊಳಿಸಲು ಪ್ರಾಮಾಣಿಕವಾಗಿ ಶ್ರಮಿಸಲಿದೆ.
4 ಪಿಒಡಬ್ಲ್ಯೂ (ಯುದ್ಧಾಪರಾಧಿ) ಹಾಗೂ ಎಂಐಎ ನೀತಿ ಯಥಾಸ್ಥಿತಿ ಮುಂದುವರಿಸಿಕೊಂಡು, ಈಗಾಗಲೇ ಗುರುತಿಸಿರುವವರನ್ನು ಅವರವರ ದೇಶಕ್ಕೆ ಕಳುಹಿಸಲಾಗುವುದು.

ಗೌರಿ ಹತ್ಯೆ

ಪ್ರಮುಖ ಆರೋಪಿ ಪರಶುರಾಮ್ ಸೆರೆ

ಈತನೇ ಗೌರಿಗೆ ಗುಂಡಿಕ್ಕಿದ್ದ ಎಂಬ ಗುಮಾನಿ | ವಿಜಯಪುರದ ಸಿಂಧಗಿ ಮನೆಯಲ್ಲಿ ದಸ್ತಗಿರಿ | 14 ದಿನ ವಶಕ್ಕೆ ಪಡೆದ ವಿಶೇಷ ತನಿಖಾ ತಂಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣ ಸಂಬಂಧ ಮತ್ತೊಬ್ಬ ಪ್ರಮುಖ ಆರೋಪಿ ಎನ್ನಲಾದ ಪರಶುರಾಮ್ ವಾಗ್ಮೋರೆಯನ್ನು ಸಿಂಧಗಿಯಲ್ಲಿ ವಿಶೇಷ ತನಿಖಾ ತಂಡ(ಎಸ್‌ಐಟಿ) ಬಂಧಿಸಿದೆ.

ಈತನೇ ಗೌರಿ ಮೇಲೆ ಗುಂಡು ಹಾರಿಸಿದ್ದ ಎಂದು ಶಂಕಿಸಿರುವ ಎಸ್‌ಐಟಿ ಪೊಲೀಸರು, ಹೆಚ್ಚಿನ ವಿಚಾರಣೆಗೆ ನ್ಯಾಯಾಲಯದ ಅನುಮತಿಯೊಂದಿಗೆ 14 ದಿನಗಳ ಕಾಲ ತಮ್ಮ ವಶಕ್ಕೆ ಪಡೆದಿದ್ದಾರೆ.

ವಾಗ್ಮೋರೆ ಬಂಧನದೊಂದಿಗೆ ಗೌರಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಬಂಧಿತರ ಸಂಖ್ಯೆ ಐದಕ್ಕೇರಿದೆ. ಇದಲ್ಲದೇ, ಮತ್ತೊಬ್ಬ ಆರೋಪಿ ಅನಿಲ್ ಎಂಬಾತನನ್ನೂ ಪೊಲೀಸರು ವಶಕ್ಕೆ ಪಡೆದು ಗೌಪ್ಯ ಸ್ಥಳದಲ್ಲಿ ವಿಚಾರಣೆ ನಡೆಸುತ್ತಿದ್ದಾರೆ. ಗೌರಿ ಹತ್ಯೆ ಹಾಗೂ ಚಿಂತಕ ಭಗವಾನ್ ಹತ್ಯೆಗೆ ಸಂಚು ರೂಪಿಸಿದ ಆರೋಪದ ಮೇಲೆ ಕೆ.ಟಿ. ನವೀನ್‌ಕುಮಾರ್ ಅಲಿಯಾಸ್ ಹೊಟ್ಟೆ ಮಂಜ, ಅಮೋಲ್ ಕಾಳೆ, ಅಮಿತ್ ದೇಗ್ವೇಕರ್, ಮನೋಹರ್ ಎಡವೆ ಹಾಗೂ ಪ್ರವೀಣ್ ಅಲಿಯಾಸ್ ಸುಜಿತ್‌ನನ್ನು ಬಂಧಿಸಿದ್ದ ಪೊಲೀಸರು, ಅವರು ನೀಡಿದ ಮಾಹಿತಿ ಆಧಾರದ ಮೇಲೆ ವಾಗ್ಮೋರೆಯನ್ನು ಸಿಂಧಗಿಯಲ್ಲಿ ಬಂಧಿಸಿ ಬೆಂಗಳೂರಿನ ನ್ಯಾಯಾಲಯಕ್ಕೆ ಹಾಜರುಪಡಿಸಿ ತಮ್ಮ ವಶಕ್ಕೆ ಪಡೆದಿದ್ದಾರೆ.

ಸೋಮವಾರವೇ ವಶಕ್ಕೆ: ಸೋಮವಾರ ಬೆಳಗ್ಗೆಯೇ ಎಸ್‌ಐಟಿ ಅಧಿಕಾರಿಗಳ ತಂಡ ಬಿಜಾಪುರದ ಸಿಂಧಗಿಯ ವಿದ್ಯಾನಗರದಲ್ಲಿ ಕಾರ್ಯಾಚರಣೆ ನಡೆಸಿ ಪರಶುರಾವ್ ವಾಗ್ಮೋರ್‌ನನ್ನು ವಶಕ್ಕೆ ಪಡೆದು ಮಂಗಳವಾರ ಬೆಂಗಳೂರಿಗೆ ಕರೆತಂದು ಮಧ್ಯಾಹ್ನ 3.30ರ ಸಮಯದಲ್ಲಿ 3ನೇ ಎಸಿಎಂಎಂ ಕೋರ್ಟ್ ಮುಂದೆ ಹಾಜರುಪಡಿಸಿದ್ದಾರೆ. ಈ ವೇಳೆ ನ್ಯಾಯಾಧೀಶರು ನಿಮ್ಮ ಪರ ವಾದ ಮಾಡಲು ವಕೀಲರನ್ನು ನೇಮಿಸಿಕೊಳ್ಳುತ್ತೀರ ಅಥವಾ ಸರಕಾರಿ ವಕೀಲರನ್ನು ನೇಮಿಸಬೇಕಾ ಎಂದು ಆರೋಪಿಯನ್ನು ಪ್ರಶ್ನಿಸಿದ್ದಾರೆ.

→ 4

ರಾಹುಲ್ ಗಾಂಧಿಯ ಶಿಕಂಜಿ ಭಾಷಣದ ಸತ್ಯಾಂಶವೇನು?

ದೆಹಲಿ: ರಾಹುಲ್ ಗಾಂಧಿ ಮತ್ತೆ ಟೀಕಾಕಾರರ ಬಾಯಿಗೆ ಆಹಾರವಾಗಿದ್ದಾರೆ. ಸೋಮವಾರ ಹಿಂದುಳಿದ ವರ್ಗಗಳ ಸಮುದಾಯದ ಸಭೆಯಲ್ಲಿ ಭಾಷಣ ಮಾಡಿದ ರಾಹುಲ್, 'ಕೊಕಾ ಕೋಲಾ ಕಂಪನಿ ಆರಂಭಿಸಿದ್ದು ಶಿಕಂಜಿ (ನಿಂಬು ಸೋಡಾ ಮಾರಾಟಗಾರ), ಮೆಕ್ ಡೊನಾಲ್ಡ್‌ಅನ್ನು ಆರಂಭಿಸಿದ್ದು ಒಬ್ಬ ಢಾಬಾವಾಲಾ. ಫೋರ್ಡ್, ಹೊಂಡಾ ಹಾಗೂ ಮರ್ಸಿಡಿಸ್ ಕಂಪನಿಗಳನ್ನು ಆರಂಭಿಸಿದ್ದು ಯಾರು? ಮೆಕಾನಿಕ್‌ಗಳು. ಭಾರತದಲ್ಲಿ ಪ್ರತಿಭಾವಂತರಿಗೆ ಸರಿಯಾದ ಮನ್ನಣೆ ಸಿಗುವುದಿಲ್ಲ' ಎಂದು ಹೇಳಿಕೆ ನೀಡಿದ್ದರು.

ರಾಹುಲ್ ಗಾಂಧಿ ಅವರ ಈ ಹೇಳಿಕೆಗೆ ಟ್ವಿಟರ್‌ನಲ್ಲಿ ವ್ಯಾಪಕ ಟೀಕೆಗಳು ವ್ಯಕ್ತವಾಗಿತ್ತು. ರಾಹುಲ್ ಈ ಭಾಷಣ ಮಾಡುವ ಮುನ್ನ ಸತ್ಯಾಂಶ ಪರಿಶೀಲಿಸಿದ್ದರೇ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಈ ಕಂಪನಿಗಳ ಅಧಿಕೃತ ವೆಬ್‌ಸೈಟ್‌ಗಳ ಮಾಹಿತಿ ನೋಡಿದರೆ, ರಾಹುಲ್ ಗಾಂಧಿ ತಮ್ಮ ಭಾಷಣದಲ್ಲಿ ಹೇಳಿರುವುದೆಲ್ಲ ಸುಳ್ಳು ಎನ್ನುವುದು ಸಾಬೀತಾಗುತ್ತದೆ.

ಕೊಕಾ ಕೋಲಾ ಆರಂಭ ಹೇಗೆ?

ಫೋರ್ಡ್, ಹೊಂಡಾ, ಮರ್ಸಿಡೀಸ್ ಕಂಪನಿ ಆರಂಭಿಸಿದ್ದು ಯಾರು?

→ 4

ಮೆಕ್‌ಡೊನಾಲ್ಡ್ ಆರಂಭಿಸಿದ್ದು ಢಾಬಾವಾಲ ಅಲ್ಲ!

ಬ್ರಿಟಾನಿಕಾ.ಕಾಮ್ ವೆಬ್‌ಸೈಟ್ ಪ್ರಕಾರ ಮೌರಿಸ್ ಹಾಗೂ ರಿಚರ್ಡ್ ಮೆಕ್‌ಡೊನಾಲ್ಡ್ ಎಂಬ ಸಹೋದರರು ಕ್ಯಾಲಿಫೋರ್ನಿಯಾದಲ್ಲಿ ಸಣ್ಣ ಹ್ಯಾಂಬರ್ಗರ್ ಅಂಗಡಿ ಆರಂಭಿಸಿದ್ದರು. ಇತರೆ ಮೂಲಗಳ ಪ್ರಕಾರ ಇವರು ಬರ್ಗರ್ ಅಂಗಡಿ ತೆರೆದಿದ್ದರು ಎಂದು ತಿಳಿಸಲಾಗಿದೆ.

ಮೇಲ್ಮನೆ ಚುನಾವಣೆ: 2 ಜೆಡಿಎಸ್ 1 ಬಿಜೆಪಿ ತೆಕ್ಕೆಗೆ, 3 ಎಣಿಕೆ ಚಾಲ್ತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಧಾನಪರಿಷತ್ತಿನ 6 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮಂಗಳವಾರ ತಡರಾತ್ರಿ ವೇಳೆಗೆ ಮೂರು ಕ್ಷೇತ್ರಗಳ ಫಲಿತಾಂಶ ಪ್ರಕಟವಾಗಿದ್ದು, ಜೆಡಿಎಸ್ 2 ಕ್ಷೇತ್ರದಲ್ಲಿ ಹಾಗೂ ಬಿಜೆಪಿ ಒಂದು ಕ್ಷೇತ್ರದಲ್ಲಿ ಭರ್ಜರಿ ಗೆಲುವು ಸಾಧಿಸಿದೆ.

ಜೂ.8ರಂದು 3 ಶಿಕ್ಷಕರ ಕ್ಷೇತ್ರ ಹಾಗೂ 3 ಪದವೀಧರ ಕ್ಷೇತ್ರದ ಚುನಾವಣೆ ನಡೆದಿತ್ತು. ಮಂಗಳವಾರ ಮತಗಳ ಎಣಿಕೆ ಪ್ರಕ್ರಿಯೆ ನಡೆದಿದ್ದು, ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಯ ವೈ.ಎ.ನಾರಾಯಣಸ್ವಾಮಿ 2 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ನೈರುತ್ಯ ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ ಗೆಲುವು ಸಾಧಿಸಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ, ವಿಧಾನ ಪರಿಷತ್ ಉಪಸಭಾಪತಿ ಮರಿತಿಬ್ಬೇಗೌಡ ಅವರು ನಾಲ್ಕನೇ ಬಾರಿಗೆ ಜಯಗಳಿಸಿದ್ದಾರೆ.

ಹಾಲಿ ವಿಧಾನ ಪರಿಷತ್ ಸದಸ್ಯ ರಮೇಶ್ ಬಾಬು ಬಿಜೆಪಿಯ ವೈ.ಎ. ನಾರಾಯಣ ಸ್ವಾಮಿ ಎದುರು ಸೋಲನುಭವಿಸಿದ್ದಾರೆ. ಇನ್ನು ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಮೊದಲ ಪ್ರಾಶಸ್ತ್ಯದ ಮತಗಳಲ್ಲಿ ಅಲ್ಪ ಮುನ್ನಡೆ ಕಾಯ್ದುಕೊಂಡಿದ್ದ ಮರಿತಿಬ್ಬೇಗೌಡರು 2ನೇ ಪ್ರಾಶಸ್ತ್ಯದ ಮತ ಪಡೆದು ಗೆಲುವಿನ ನಗೆ ಬೀರಿದರು. ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ 2ನೇ ಸ್ಥಾನ ಪಡೆದು ಸೋಲನುಭವಿಸಿದರು. ಬಿಜೆಪಿ ಅಭ್ಯರ್ಥಿ ಬಿ.ನಿರಂಜನಮೂರ್ತಿ 3ನೇ ಸ್ಥಾನಕ್ಕೆ ತಳ್ಳಲ್ಪಟ್ಟರು.

ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಯನ್ನೊಳಗೊಂಡ ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ 20,673 ಮತದಾರರಲ್ಲಿ 16,696 ಮತದಾರರು ಮತ ಚಲಾಯಿಸಿದ್ದರು.

ಮರಿತಿಬ್ಬೇಗೌಡ

ಎಸ್.ಎಲ್.ಭೋಜೇಗೌಡ

ವೈ.ಎ.ನಾರಾಯಣಸ್ವಾಮಿ